**ದಿನಾಂಕಃ 13.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿ ಅಪ್ರಾಪ್ತ ವಯಸ್ಕನಾಗಿರುವುದರಿಂದ ನ್ಯಾಯಾಲಯ ಈ ಕೆಳಕಂಡ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಿ ಉತ್ತರ ಪಡೆದಿರುತ್ತದೆ.**

1. ನೀನು ಎಲ್ಲಿಗೆ ಬಂದ್ದಿದೀಯ?

ಉತ್ತರಃ ಕೋರ್ಟಿಗೆ ಬಂದಿದ್ದೀನಿ.

2. ನಾನು ಯಾರು?

ಉತ್ತರಃ ಜಡ್ಜ್

3. ಎದುರು ಇರುವವರು ಯಾರು?

ಉತ್ತರಃ ಲಾಯರ್

**(ಸಾಕ್ಷಿ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಹೊಂದಿರುತ್ತಾನೆ ಎನ್ನುವುದನ್ನು ಮನಗೊಂಡು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. ಚಾಸಾ-11 ನನ್ನ ತಾಯಿ. ಚಾಸಾ-13 ಮತ್ತು 14 ನನಗೆ ಗೊತ್ತು. ಅವರು ನಮ್ಮ ಮನೆಯ ಮುಂದೆ ಇದ್ದಾರೆ. ಚಾಸಾ-3 ಯಶವಂತ್ ನನ್ನ ಅಣ್ಣ. ಚಾಸಾ-1 ನನ್ನ ದೊಡ್ಡಪ್ಪ.

4. ಟಿ.ನರಸೀಪುರದ ನ್ಯಾಯಾಧೀಶರ ಮುಂದೆ ನಾನು ನಮ್ಮ ತಂದೆ ನಮ್ಮ ಅಜ್ಜಿಗೆ ಹೊಡೆದ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನನ್ನ ತಂದೆ ನನ್ನ ಅಜ್ಜಿಗೆ ದೊಣ್ಣೆಯಿಂದ ಹೊಡೆದರು, ನನಗೆ ಊಟ ಕೊಡುವುದಿಲ್ಲ, ಚಿಕಿತ್ಸೆಗೆ ದುಡ್ಡು ಕೊಡುವುದಿಲ್ಲ ಎಂದು ಹೇಳಿ ನನ್ನ ಅಜ್ಜಿಗೆ ಹೊಡೆದಿದ್ದರು. ನಂತರ ಅದನ್ನು ಅವರು ನನಗೆ ಓದಿ ಹೇಳಿ, ನನ್ನ ಸಹಿಯನ್ನು ಪಡೆದುಕೊಂಡರು. ಅವರು ಹೊಡೆದಾಗ ನಾನು ಮತ್ತು ನನ್ನ ಅಣ್ಣ ಯಶವಂತ್ ಅಲ್ಲಿದ್ದೆವು. ನಾವು ಕಿರುಚಿಕೊಂಡೆವು. ಆಗ ನನ್ನ ತಾಯಿ ಪಲ್ಲವಿ ಮತ್ತು ದೊಡ್ಡಮ್ಮ (ಚಾಸಾ-12) ಬಂದರು. ನಾಗರಾಜಣ್ಣ(ಚಾಸಾ-14) ಮತ್ತು ಮಹದೇವಣ್ಣ (ಚಾಸಾ-13)ರವರು ಬಂದರು. ನನ್ನ ತಾಯಿ ನನ್ನ ಅಜ್ಜಿಗೆ ನೀರನ್ನು ಕುಡಿಸಿದರು. ನಂತರ ನನ್ನ ಅಜ್ಜಿ ಸತ್ತು ಹೋದರು. ನಂತರ ನನ್ನ ದೊಡ್ಡಪ್ಪ ಚಾಸಾ-1 ರವರು ಬಂದು ನನ್ನ ಅಜ್ಜಿಯನ್ನು ಜಗಲಿಯ ಮೇಲೆ ಮಲಗಿಸಿದರು. ನಂತರ ನನ್ನ ಅಜ್ಜಿಯನ್ನು ಟಿ.ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು

ಹೋದರು. ನನ್ನ ಅಜ್ಜಿಗೆ ನನ್ನ ತಂದೆ ಹೊಡೆದಾಗ ನಾವು ಮನೆಯ ಮುಂದಿರುವ ಕಲ್ಲಿನ ಮುಂದೆ ಕುಳಿತಿದ್ದೆವು. ನಮ್ಮ ತಂದೆ ಅಜ್ಜಿಗೆ ಹೊಡೆದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ದೊಣ್ಣೆಯನ್ನು ತೋರಿಸಿ, ಕೇಳಲಾಗಿ, ಅದನ್ನು ಗುರುತಿಸಿರುತ್ತಾನೆ. ಆ ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

5. ಸಾಕ್ಷಿಗೆ ಕಲಂ.164 ರ ಅಡಿಯಲ್ಲಿ ದಾಖಲಾಗಿರುವ ಹೇಳಿಕೆಯನ್ನು ತೋರಿಸಿ ಕೇಳಲಾಗಿ, ಅದರ ಮೇಲಿರುವ ಸಹಿಯನ್ನು ತನ್ನದೆಂದು ಗುರುತಿಸಿರುತ್ತಾನೆ. ಸದರಿ ಹೇಳಿಕೆಯನ್ನು ನಿಪಿ-9 ಎಂತಲೂ ಅದರ ಮೇಲೆ ಸಾಕ್ಷಿ ಗುರತಿಸಿದ ತನ್ನ ಸಹಿಯನ್ನು ನಿಪಿ-9(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು.

6. ನನ್ನ ಅಜ್ಜಿಯ ಕಪಾಲಕ್ಕೆ, ಕಣ್ಣಿಗೆ ಮತ್ತು ತಲೆಗೆ ಏಟಾಗಿತ್ತು.

7. ಪೊಲೀಸರ ಮುಂದೆಯೂ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಆರೋಪಿ ಪರ ವಕೀಲರು ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.